ತರವಾತ ವಸ್ತಾನು' ಎಂದೆ. ಅವರೆಲ್ಲಾ ಒಮ್ಮೆಲೇ ಗಪ್ ಚಿಪ್ ಆದರು. ಕೊನೆಗೆ ವಿಮಾನ ಇಳಿಯುವಾಗ 'ಸಾರಿ'ಯನ್ನೂ ಕೇಳಿದರು. ಆದರೆ ನಮ್ಮ ಕ್ಯಾಪ್ಟನ್ ಗೆ ಈ ವಿಷಯ ಹೇಗೋ ಗೊತ್ತಾಯಿತು. ವಿಮಾನಕ್ಕೂ ಗೋಡೆಗಳಿವೆ, ಆ ಗೋಡೆಗಳಿಗೂ ಕಿವಿಗಳಿವೆ ಎಂಬ ಸಂಗತಿ ನನಗಾಗಲೇ ತಿಳಿದದ್ದು. ಅವರು ನನ್ನನ್ನು ಕರೆಸಿಕೊಂಡು ಚೆನ್ನಾಗಿ ಛೀಮಾರಿ ಹಾಕಿದರು. ನನ್ನದೇ ಪೂರಾ ತಪ್ಪು ಎಂದು ಅಪವಾದ ಹೊರಿಸಿದರು. ಯಾವುದೇ ಕಾರಣಕ್ಕೂ ಪ್ರಯಾಣಿಕರ ಮನಸ್ಸನ್ನು ನೋಯಿಸಬಾರದಂತೆ. ಅವರಿಗೆ ಎದುರು ಹೇಳಬಾರದಂತೆ. ಏಕೆಂದರೆ ಪ್ರಯಾಣಿಕರಿಂದಲೇ ನಮ್ಮೆಲ್ಲರ ಜೀವನ ನಡೆಯುವುದಂತೆ ಎಂದೆಲ್ಲಾ ಉಪದೇಶ ನೀಡಿದರು. ಅದು ಸರಿ ಸರ್, ಹಾಗೆಂದು ಅವರೆಷ್ಟೇ ಕೆಟ್ಟದಾಗಿ ಮಾತನಾಡಿದರೂ ನಾವು ಅದಕ್ಕೆ ಉತ್ತರಿಸುವುದು ತಪ್ಪೇ...ನಮ್ಮ ಆತ್ಮಾಭಿಮಾನ ಎಂಬುದಕ್ಕೆ ಧಕ್ಕೆ ಬಂದರೆ ಹೇಗೆ ತಡೆದುಕೊಳ್ಳೋದು ಸರ್?' ಎಂದು ಕೇಳಿದೆ. ಅದಕ್ಕವರು, 'ನೋ...ಅದೆಲ್ಲಾ ನೀವು ಯೋಚಿಸಬಾರದು. ಪ್ರಯಾಣಿಕರಿಗೆ ನೋಯಿಸುವುದಿಲ್ಲವೆಂದು ನೀವು ಪ್ರತಿಜ್ಞೆ ಮಾಡಿದ್ದೀರಾ... ಅದೊಂದೇ ನಿಮ್ಮ ತಲೆಯಲ್ಲಿರಬೇಕು...ನೀನು ತುಂಬಾ ಅರೋಗೆಂಟ್. ನನ್ನ ಬಳಿಯೇ ಇಷ್ಟು ರಫ್ ಆಗಿ ಮಾತನಾಡುತ್ತಿದ್ದೀಯಾ. ಇನ್ನು ಪ್ರಯಾಣಿಕರ ಬಳಿ ಹೇಗೆ ಮಾತನಾಡಬಹುದು' ಎಂದು ನನ್ನ ರೆಕಾರ್ಡ್ ಮೇಲೆ ರಿಮಾರ್ಕ್ ಬರೆದು ಬಿಟ್ಟಿದ್ದರು.

ಆ ಅಪಾದನೆಯಿಂದ ಹೊರಬರಲು ನಾನು ಪಟ್ಟ ಪಾಡು ಅಷ್ಟಿಷ್ಟಲ್ಲ. ಕೆಲಸವನ್ನೇ ಕಳೆದುಕೊಳ್ಳುವ ಸ್ಥಿತಿಗೆ ಬಂದಿದ್ದೆ. ಇದು ಗಗನಸಖಿಯರ ವಾಸ್ತವ ಸ್ಥಿತಿ. ಒಬ್ಬ ಅತಿ ಸಾಮಾನ್ಯ ಹುಡುಗಿಯಾದರೂ ಪ್ರತಿಭಟಿಸುವ ಹಕ್ಕನ್ನು ಹೊಂದಿರುತ್ತಾಳೆ. ಆದರೆ ನಾವು ಹಾಗಲ್ಲ. ವೈಯಕ್ತಿಕ ಸಮಸ್ಯೆ ಏನೇ ಇರಲಿ, ವೃತ್ತಿ ಸಮಸ್ಯೆ ಯಾವುದೇ ಇರಲಿ....ನಮ್ಮ ಮುಖದ ಮೇಲೆ ತಿಳಿನಗೆ ಹಾರಾಡುತ್ತಲೇ ಇರಬೇಕು. ನಿರ್ಭಾವುಕ ಸಖಿಯರು ನಾವು....' ಎಂದಳು. ನೀತಾ ತನ್ನ ತುಟಿಗೆ ಲಿಪ್ ಸ್ಟಿಕ್ ಹಚ್ಚಿಕೊಳ್ಳುತ್ತಲೇ 'ಈ ಸಹನೆಯ, ಮಂದಹಾಸದ ನಟನೆ ಮಾಡೀ ಮಾಡೀ ಕೆಲವೊಮ್ಮೆ ಎಷ್ಟು ಅವರ್ಷನ್ ಬಂದು ಬಿಡುತ್ತೆ ಗೊತ್ತಾ.... ಮನೆಗೆ ಹೋದರೆ ಮನೆಯವರೂ ಅದನ್ನೇ ನಿರೀಕ್ಷಿಸ್ತಾರೆ...ನಮ್ಮ ದುಡ್ಡು ಅವರಿಗೆ ಬೇಕು. ಹಾಗೇ ನಮ್ಮ ವಿಧೇಯತೆಯೂ ಬೇಕು... ಒಂದು ವಾರದ ಒಂದೇ ಸಮದ ಸುತ್ತಾಟದ ನಂತರ ತೀರಾ ಬಳಲಿ ಮನೆಗೆ ಹೋದೆ. ರಿಲ್ಯಾಕ್ಸ್ ಆಗಿ ಯಾವುದೋ ಫಿಕ್ಷನ್ ಓದುತ್ತಾ ಕುಳಿತಿದ್ದೆ. ಟಿ.ವಿ ನೋಡುತ್ತಿದ್ದ ನನ್ನ ಅಣ್ಣ ಕಾಫಿ ಮಾಡಿಕೊಡು ಎಂದ. ನಾನದಕ್ಕೆ ಇಲ್ಲಾ ಕಣೋ...ಸುಸ್ತಾಗಿದೆ. ನೀನೇ ಮಾಡು, ನನಗೂ ಒಂದು ಕಪ್ ಕೊಡು ಎಂದೆ. ಅವನು ಅದಕ್ಕೆ ಅಲ್ಲಿ ಯಾವ್ಯಾವನಿಗೋ ಸೇವೆ ಮಾಡ್ತೀಯಾ, ಸ್ವಂತ ಅಣ್ಣನಿಗೆ ಮಾಡೋಕ್ಕಾಗಲ್ಲ ಅಲ್ವಾ ಎಂದು ಹೀಯಾಳಿಸಿದ. ನೋಡು, ನನ್ನ ವೃತ್ತಿಯ ಬಗ್ಗೆ ಕೀಳಾಗಿ ಮಾತನಾಡಬೇಡ. ಕೆಲಸವಿಲ್ಲದ ನಿನ್ನ ಜೀವನ ನಡೆಯುತ್ತಿರುವುದೂ ಸಹ ನನ್ನ ವೃತ್ತಿಯಿಂದಲೇ ಎಂಬುದನ್ನು ಮರೆಯಬೇಡ ಎಂದೆ. ಗೊತ್ತು ಗೊತ್ತು, ನಿನ್ನದೆಂತಹ ಘನಂದಾರಿ ವೃತ್ತಿ ಅಂತ. ಯಾವನ್ದೊ ವಾಂತಿ ಬಳೀತೀಯಾ, ಯಾವನ್ದೊ ಬೆಲ್ಟ್ ಹಾಕ್ತೀಯಾ...ಮುಖಕ್ಕೆ ಬಣ್ಣ ಬಳ್ಕೊಂಡು ಹಲ್ಲು ಗಿಂಜುತ್ತಾ ದುಡಿಯುವಂತಹ ಕೆಲಸ ಇರೋದಕ್ಕಿಂತಾ ಕೆಲಸವೇ ಇಲ್ಲದೆ ಇರೋದು ಎಷ್ಟೋ ವಾಸಿ ಎಂದು ಅವನೆಂದಾಗ ಎಷ್ಟು ಒದ್ದಾಡಿದೆ ಗೊತ್ತಾ. ರೂಮಿಗೆ ಹೋಗಿ ಬಾಗಿಲು ಹಾಕ್ಕೊಂಡು ಇಡೀ ದಿನ ಅತ್ತೆ....' ಎಂದಳು.

ನೀತಾ, ರೀನಾರ ಮಾತನ್ನು ಕೇಳಿ ದಿಶಾಳ ಮೊಗ ಇನ್ನಷ್ಟು ಚಿಕ್ಕದಾಯಿತು. ಎಂಥ ವಿಪರ್ಯಾಸ...ಇಡೀ ಜಗತ್ತಿನ ಸೊಬಗನ್ನೇ ತಮ್ಮೊಳಗೆ ತುಂಬಿಕೊಂಡಂತೆ ಕಾಣುವ ರೀನಾ, ನೀತಾರ ಒಳಬದುಕಿನಲ್ಲಿ ಹೀಗಿದೆಯೇ..



ಚಿಕ್ಕವಳಿದ್ದಾಗಿನಿಂದಲೂ ಗಗನಸಖಿಯಾಗಬೇಕೆಂದು ಕನಸು ಕಂಡವಳು ನಾನು. ವಿಮಾನದಲ್ಲಿ ಹಾರಾಡುತ್ತಾ, ಪಂಚತಾರಾ ಹೋಟೆಲ್ ಗಳಲ್ಲಿ ಉಳಿದುಕೊಳ್ಳುತ್ತಾ, ಅಲಂಕರಿಸಿಕೊಂಡು ನಗೆ ಬೀರುವುದು ಎಂತಹ ಸುಂದರ ಕಾಯಕ ಎಂದುಕೊಂಡಿದ್ದೆ. ಈಗ ಸತ್ಯದ ಅರಿವಾಗುತ್ತಿದೆ. ಎಂತಹ ಅದ್ಭುತ ಕೆಲಸವಾಗಲೀ...ಸ್ವಾಭಿಮಾನವನ್ನು ಬದಿಗಿಟ್ಟು ಕೆಲಸ ಮಾಡಲಾಗದು ಎಂದುಕೊಂಡಳು. ಹೀಗೇ ಅದೆಷ್ಟು ಮಾತುಗಳು...ಅದೆಷ್ಟು ಕೆಲಸಗಳು...ವಿಮಾನದ ರೆಕ್ಕೆಯ ಜೊತೆಗೆ ಅವರ ಮಾತುಗಳೂ ಗರಿಗೆದರಿ ಪ್ರಯಾಣ ಸಾಗಿದ್ದೇ ಗೊತ್ತಾಗಲಿಲ್ಲ. ಇನ್ನೇನು ಜರ್ಮನಿ ಬಂದೇಬಿಡ್ತು ಅಂದುಕೊಂಡರು. ಮತ್ತೇ ತಾವು ಯಾವಾಗ ಒಟ್ಟಿಗೇ ಸೇರುತ್ತೇವೋ ಎಂದು ಪೇಚಾಡಿಕೊಂಡರು.

ಅದೇ ಸಮಯಕ್ಕೆ ಅತುಲ್ ಗಾಬರಿಯಿಂದ ಬಳಿಗೆ ಬಂದ. 'ಕಾಕ್ ಪಿಟ್ ನಲ್ಲಿ ಕುಳಿತ ಪೈಲಟ್ ದಿಲೀಪ್ ಟೆನ್ಷನ್ ಆಗಿದ್ದಾರೆ. ಸ್ಲ್ಯಾಟ್ ಯಾಕೋ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎನ್ನುತ್ತಿದ್ದಾರೆ. ಇನ್ನೇನು ಇನ್ನು ಸ್ವಲ್ಪ ಹೊತ್ತಿಗೇ ಲ್ಯಾಂಡ್ ಆಗಬೇಕು....ಲ್ಯಾಂಡ್ ಆಗಲು ಸ್ಲ್ಯಾಟ್ ತುಂಬಾ ಮುಖ್ಯ...ನೀವೆಲ್ಲಾ ಯಾವುದಕ್ಕೂ ಅಲರ್ಟ್ ಆಗಿ ಇರಿ, ಪ್ರಯಾಣಿಕರಿಗೆ ಮಾತ್ರ ಈಗಲೇ ಏನೂ ತಿಳಿಯಬಾರದು' ಎಂದು ಹೇಳಿ ಹೋದ. ಅವನ ಮಾತನ್ನು ಕೇಳಿ ಎಲ್ಲರಿಗೂ ಹೆದರಿಕೆಯಾಯ್ತು. ಓ ದೇವರೇ..., ಏನೂ ಆಗದಿರಲಪ್ಪಾ... ನೀತಾ ಬೇಡಿಕೊಂಡಳು.

ದಿಶಾ ಅಚ್ಚರಿ, ಗಾಬರಿಯಿಂದ ನೋಡತೊಡಗಿದಳು. ರೀನಾ, 'ದೇವುಡಾ...ಎಲ್ಲವೂ ಸರಿ ಹೋಗುವಂತೆ ಮಾಡು' ಎಂದಳು. ಅವರ ಮೊರೆ ಕೇಳಿಸಿತೋ ಏನೋ ಅತುಲ್ ಮತ್ತೇ ಬಂದು, 'ನೋ ವರೀಸ್..., ಎಲ್ಲಾ ಸರಿ ಹೋಯ್ತು. ಪೈಲಟ್ ದಿಲೀಪ್ ಎಲ್ಲಾ ಸರಿ ಮಾಡಿದರು. ಹಿ ಈಸ್ ಜೀನಿಯಸ್' ಎಂದ. ರೀನಾ 'ಅಬ್ಬಾ..., ಹೋದ ಜೀವ ಬಂದಂತಾಯ್ತು....ದಿಶಾ, ಈ ತರದ ಸಮಸ್ಯೆಗಳನ್ನು ನಾವು ಪ್ರತಿ ಜರ್ನಿಯಲ್ಲೂ ಎದುರಿಸುತ್ತೇವೆ.... ಒಂದಲ್ಲಾ ಒಂದು ಸಮಸ್ಯೆಯಿರುತ್ತೆ. ಆದರೂ....ಏನೋ ಒಂಥರಾ ಮಜಾ ನೋಡು. ನಿಜ, ಎಲ್ಲಾ ಗಗನಸಖಿಯರು ನೀರಜಾ ಬ್ಯಾನೋಟ್ ಆಗಿರೋಲ್ಲ. ನಮ್ಮಲ್ಲೂ ಅಪಾರ ಸ್ವಾರ್ಥ ಇದೆ. ನಮ್ಮ ಜೀವವೇ ಮುಖ್ಯ ಎಂದುಕೊಳ್ಳುತ್ತೇವೆ...ಅದೇನೇ ಇರಲಿ, . ನಾನಂತೂ ನನ್ನ ಈ ವೃತ್ತಿಯನ್ನು ತುಂಬಾ ಪ್ರೀತಿಸುತ್ತೇನೆ. ಏನೇ ಸಮಸ್ಯೆಯಿರಬಹುದು.....ಈ ಗಾಳಿಯಲ್ಲಿ ತೇಲಾಡುವಾಗ, ಭೂಮಿಯ ನೆಲವನ್ನು ಮತ್ತೆ ಸ್ಪರ್ಶಿಸಿದಾಗ ಎಂತಹುದೋ ಧನ್ಯತೆಯ ಭಾವ. ವಿಮಾನದಲ್ಲಿರುವ ಅಷ್ಟೂ ಪ್ರಯಾಣಿಕರ ಜೀವ ನಮ್ಮ ಕೈಲಿದೆ. ಅವರು ನಮ್ಮನ್ನೇ ಅವಲಂಬಿಸಿದ್ದಾರೆ...ಎಂಬ ಭಾವ ಏನೋ ಹೆಮ್ಮೆಯನ್ನು ಸ್ಫುರಿಸುತ್ತದೆ....ಅವರೇನೇ ಕುಚೇಷ್ಟೆ ಮಾಡಲಿ, ತಿನ್ನುವಂತೆ ನೋಡಲಿ...ಅವರ ಕಂಗಳಲ್ಲಿ ಆಳವಾಗಿ ದಿಟ್ಟಿಸುವಾಗ ಅಲ್ಲೊಂದು ಪುಟ್ಟ ಮಗು ಕಾಣುತ್ತದೆ. ಆ ಮಗು ನಮ್ಮನ್ನೇ ಆ ಕ್ಷಣದ ತಾಯಿ ಎಂದು ಭಾವಿಸುತ್ತದೆ. ಅಮ್ಮ ಇದ್ದಾಳೆ, ಏನೇ ಅಪಾಯ ಬರಲಿ, ಅವಳು ನಮ್ಮನ್ನು ರಕ್ಷಿಸುತ್ತಾಳೆ ಎಂಬಂತೆ ನಮ್ಮನ್ನು ನೋಡುತ್ತಿರುವಂತೆ ನನಗನ್ನಿಸುತ್ತದೆ.... ಅವರ ಅಂತರಾತ್ಮದಲ್ಲಿ ನಮಗೆ ಮಾತ್ರ ಸ್ಥಾನವನ್ನು ನೀಡಿರುತ್ತಾರೆ...ಅವರಿಗೇ ಅರಿವಿಲ್ಲದಂತೆ' ಎಂದಳು ಭಾವಪೂರಿತಳಾಗಿ.

ದಿಶಾ ಅವಳ ಬೆನ್ನು ನೇವರಿಸಿ 'ಎಂಥ ಒಳ್ಳೆಯ ಮಾತನಾಡಿದೆ. ಸಮಸ್ಯೆ ಯಾವ ಕ್ಷೇತ್ರದಲ್ಲಿ ಇಲ್ಲ ಹೇಳು...ಅಟ್ಲೀಸ್ಟ್ ನಾವು ನೋಡುಗರ ಕಣ್ಣಿಗೆ ಆಗಸದ ಅಪ್ಸರೆಯರಾಗಿ ಕಾಣುತ್ತೇವಲ್ಲಾ...ಅದಕ್ಕೇ ಸಂತೋಷ ಪಡಬೇಕು...ಆದರೂ ಇವತ್ತು ನನಗೇಕೆ ಬೇಸರವಾಯ್ತು ಗೊತ್ತಾ....ಬೆಳಿಗ್ಗೆ ಮನೆಯಿಂದ ಹೊರಡುವಾಗ ನನ್ನ ಜೊತೆ ಎಂಗೇಜ್ ಮೆಂಟ್ ಆದ ಹುಡುಗನ ಅಮ್ಮ ಫೋನ್ ಮಾಡಿದ್ದರು. ನಮಗೀ ಸಂಬಂಧ ಇಷ್ಟವಿಲ್ಲ. ನಮ್ಮ ಹುಡುಗನಿಗೆ ಗಗನಸಖಿಯನ್ನು ಮದುವೆಯಾಗಲು ಯಾಕೋ ಇಷ್ಟವಿಲ್ಲ..' ಎಂದು ಫೋನ್ ಮಾಡಿದ್ದರು. ಅವರೇ ಮೇಲೆ ಬಿದ್ದು ಸಂಬಂಧವನ್ನು ಕೇಳಿಕೊಂಡು ಬಂದಿದ್ದರು. ಈಗ ಯಾರದೋ ಮಾತು ಕೇಳಿ ಬೇಡ ಅನ್ನುತ್ತಿದ್ದಾರೆ. ಗಗನಸಖಿ ಅಂದ ಮಾತ್ರಕ್ಕೆ ಕ್ಯಾರಕ್ಟರ್ ಇರಲ್ವಾ? ಏಕೋ ನನಗೆ ಅವರ ಅಭಿಪ್ರಾಯ ಕೇಳಿ ತುಂಬಾ ಬೇಸರವಾಗಿತ್ತು. ಈಗ ನಿನ್ನ ಮಾತು ಕೇಳಿ ಮನಸ್ಸು ಹಗುರವಾಯ್ತು. ನಿಮ್ಮ ಜೊತೆ ನನ್ನ ಸಂಕಟವನ್ನು ಶೇರ್ ಮಾಡಿಕೊಂಡಿದ್ದಕ್ಕೆ ಇನ್ನೂ ಒಂದಷ್ಟು ಹಗುರವಾಯ್ತು.' ಎಂದಳು. ರೀನಾ, ನೀತಾ ದಿಶಾಳನ್ನು ಅಪ್ಪಿಕೊಂಡು, ಅಪ್ಪುಗೆಯಲ್ಲೇ ಧೈರ್ಯ ಹೇಳಿದರು.